ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೦೫ (೧೯೧೩)

ಸದಸ್ಯರ ಹೆಸರು ಶ್ರೀ ವಿ ಸೋಮಣ್ಣ
(ಬನ್ನಿಪೇಟೆ)

ಉತ್ತರಿಸುವ ಸಚಿವರು ಶ್ರೀ ರಾವು ನಾಯಕ್
ಬಳಮಗಿ
(ಪಶು ಸಂಗೋಪನೆ ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ)	ನಂದಿನ ಕೆನೆಭರಿತ ಹಾಲಿನ ದರವನ್ನು ಇತ್ತೀಚೆಗೆ ಏರಿಸಲಾಗಿದೆಯೇ?	ಹೌದು
ಆ)	ಹಾಗಿದ್ದಲ್ಲಿ ಲೇಟರ್ಗೆ ಎಷ್ಟು ದರ ಏರಿಸಲಾಗಿದೆ?	ಹೆಚ್ಚಿಸಲಾದ ದರವು ಪ್ರತಿ ಲೀಟರ್ ಗೆ ರೂ ೨/– ಆಗಿರುತ್ತದೆ
ಇ)	ಈ ಹಾಲಿನ ದರವನ್ನು ಏರಿಸಲು ಕಾರಣಗಳೇನು?	ಕೆನೆಭರಿತ ಹಾಲಿನಲ್ಲಿ ಜಿಡ್ಡಿನಾಂಶ ಶೇಕಡ ೬ ರಷ್ಟು ಹಾಗೂ ಎಸ್ ಎನ್ ಎಫ್ ಅಂಶ ಶೇಕಡ ೯ ರಷ್ಟು ಇರುವುದರಿಂದ ಹಾಗೂ ಪ್ರಸ್ತುತ ಜಿಡ್ಡಿನ ದರ ಹಾಗೂ ಎನ್ ಎನ್ ಎಫ್ ದರ ಮಾರುಕಟ್ಟೆಯಲ್ಲಿ ಬಹಳಷ್ಟು ಹೆಚ್ಚಿರುವುದರಿಂದ ಕೆನೆಭರಿತ ಹಾಲಿನ ಮಾರಾಟ ದರ ಹೆಚ್ಚಿಸಲಾಗಿದೆ
ಈ)	ಇದರಿಂದ ಹೋಟೆಲುಗಳಲ್ಲಿ ಕಾಫಿ ಬೆಲೆ ಜಾಸ್ತಿಯಾಗಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೆ?	– ಇಲ್ಲ–
ಉ)	ಹಾಗಿದ್ದಲ್ಲಿ ಏರಿಸಿದ ಹೆಚ್ಚುವರಿ ಹಣದಲ್ಲಿ ಹಾಲಾ ಉತ್ಪಾದಕರಿಗೆ ನೀಡುವ ದರವೆಷ್ಟು ?	ರಾಜ್ಯದಲ್ಲಿ ಮಾರಾಟ ಮಾಡಲಾಗುತ್ತಿರುವ ಕಸೆಭರಿತ ಹಾಲಿನ ಪ್ರಮಾಣವು ಒಟ್ಟು ಹಾಲಿನ ಮಾರಾಟದ ಶೇಕಡ ೧೫ ರಷ್ಟು ಮಾತ್ರ ಇರುತ್ತದೆ ಇದರಿಂದ ಬರುವ ಲಾಭಾಂಶವನ್ನು ಒಟ್ಟು ಸಂಗ್ರಹಣೆ ಪ್ರಮಾಣಕ್ಕೆ

		ಅನ್ವಯಿಸಿ ಉತ್ಪಾದಕರಿಗೆ ನೀಡಲು ಸಾಧ್ಯವಾಗುವುದಿಲ್ಲ ಸಂಬಂಧಪಟ್ಟ ಜಿಲ್ಲಾ ಹಾಲು ಒಕ್ಕೂಟಗಳು ಈ ಕೆನೆಭರಿತ ಹಾಲಿನಿಂದ ಬರುವ ಲಾಭವನ್ನು ತಮ್ಮ ಆರ್ಥಿಕ ಸ್ಥಿತಿಗತಿಗನುಗುಣವಾಗಿ ಉತ್ಪಾದಕರಿಗೆ ನೀಡುತ್ತವೆ
ಊ)	ಏರಿಸಿರುವ ದರವನ್ನು ಕಡಿಮೆಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?	– ಇಲ್ಲ–

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೦೬ (೨೨೩೨)

ಸದಸ್ಯರ ಹೆಸರು ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲ)

ಉತ್ತರಿಸುವ ಸಚಿವರು ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬಾಗೇಪಲ್ಲಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಸ್ವಂತ ಕಟ್ಟಡವಿಲ್ಲದೆ ಅಲ್ಲಿನ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ಹೌದು
ಆ)	ಈ ತರಬೇತಿ ಸಂಸ್ಥೆಗೆ ಕಟ್ಟಡ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	ಹೌದು
ಇ)	ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?	ನಿವೇಶನದ ಸುತ್ತಲೂ ಕಾಂಪೌಂಡ್ ನಿರ್ಮಿಸಲಾಗಿದೆ ಕಟ್ಟಡ ನಿರ್ಮಾಣವು ಆಯವ್ಯಯ ಅನುದಾನದ ಲಭ್ಯತೆಯ ಮೇಲೆ ಆಧರಿಸಿರುತ್ತದೆ